**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೈದನೆಯ ಅಧಿವೇಶನ**

# ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–19)**

**(ಕರ್ನಾಟಕ ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿ)**

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009 (2010ರ ಕರ್ನಾಟಕ ಅಧಿನಿಯಮ 10)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 3ರ ತಿದ್ದುಪಡಿ.-** ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009ರ (2010ರ ಕರ್ನಾಟಕ ಅಧಿನಿಯಮ 10) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 3ನೇ ಪ್ರಕರಣದಲ್ಲಿ,-

(i) ಉಪಪ್ರಕರಣ (1)ರ (ಎ) ಮತ್ತು (ಬಿ) ಖಂಡಗಳ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

(ಎ) ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು (ಗ್ರಾಮಾಂತರ), ಬೆಂಗಳೂರು (ನಗರ), ರಾಮನಗರ ಮತ್ತು ತುಮಕೂರು ಜಿಲ್ಲೆಗಳಿಗೆ ವಿಸ್ತರಿಸಿದ ಪ್ರಾದೇಶಿಕ ಅಧಿಕಾರ ಕ್ಷೇತ್ರವ್ಯಾಪ್ತಿಯೊಂದಿಗೆ ಬೆಂಗಳೂರಿನಲ್ಲಿ ಕೇಂದ್ರ ಸ್ಥಾನವನ್ನು ಹೊಂದಿರುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು.

(ಬಿ) ಬಾಗಲಕೋಟೆ, ಬೆಳಗಾವಿ, ಧಾರವಾಡ, ವಿಜಯಪುರ, ಗದಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ವಿಸ್ತರಿಸಿದ ಪ್ರಾದೇಶಿಕ ಅಧಿಕಾರ ಕ್ಷೇತ್ರವ್ಯಾಪ್ತಿಯೊಂದಿಗೆ ಧಾರವಾಡದಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿರುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಧಾರವಾಡ.

(ಸಿ) ಬೀದರ್, ಕಲಬುರಗಿ, ಯಾದಗಿರಿ, ಕೊಪ್ಪಳ, ಬಳ್ಳಾರಿ, ವಿಜಯನಗರ ಮತ್ತು ರಾಯಚೂರು ಜಿಲ್ಲೆಗಳಿಗೆ ವಿಸ್ತರಿಸಿದ ಪ್ರಾದೇಶಿಕ ಅಧಿಕಾರ ಕ್ಷೇತ್ರವ್ಯಾಪ್ತಿಯೊಂದಿಗೆ ರಾಯಚೂರಿನಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿರುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು.

(ಡಿ) ಶಿವಮೊಗ್ಗ, ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ವಿಸ್ತರಿಸಿದ ಪ್ರಾದೇಶಿಕ ಅಧಿಕಾರ ಕ್ಷೇತ್ರವ್ಯಾಪ್ತಿಯೊಂದಿಗೆ ಶಿವಮೊಗ್ಗದಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿರುವ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ."

(ii) (2ಬಿ) ಉಪ-ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2ಸಿ) ಉಪಪ್ರಕರಣ (1), (2ಎ) ಮತ್ತು (2ಬಿ)ರಲ್ಲಿ ಏನೇ ಒಳಗೊಂಡಿದ್ದರೂ, ಮಂಡ್ಯ, ಹಾಸನ ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಿಗೆ ವಿಸ್ತರಿಸಿದ ಪ್ರಾದೇಶಿಕ ಅಧಿಕಾರ ಕ್ಷೇತ್ರವ್ಯಾಪ್ತಿಯೊಂದಿಗೆ ವಿ.ಸಿ.ಫಾರ್ಮ್ ಮಂಡ್ಯದಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿರುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ ಎಂದು ಕರೆಯಲಾಗುವ ವಿಶ್ವವಿದ್ಯಾಲಯನ್ನು ಸ್ಥಾಪಿಸತಕ್ಕದ್ದು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಹಾಗೂ ಎಲ್ಲಾ ಪ್ರಕಾರ್ಯಗಳನ್ನು ನೆರವೇರಿಸುವ ಜವಾಬ್ದಾರಿ ಈ ಅಧಿನಿಯಮದಡಿ ಸ್ಥಾಪಿಸಲಾದ ವಿಶ್ವವಿದ್ಯಾಲಯದ್ದಾಗಿರತಕ್ಕದ್ದು.

**3. ಪ್ರಕರಣ 4ರ ತಿದ್ದುಪಡಿ.-** ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿನ (1)ನೇ ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಕೃಷಿ, ಪಶುಸಂಗೋಪನೆ, ಮೀನುಗಾರಿಕೆ, ರೇಷ್ಮೆಕೃಷಿ, ಅರಣ್ಯಶಾಸ್ತ್ರ, ಇತರ ಕೃಷಿ ಸಂಬಂಧಿತ ವಿಷಯಗಳು ಮತ್ತು ತರಬೇತಿ ಅಥವಾ ಶೈಕ್ಷಣಿಕ ಕೇಂದ್ರಗಳ ನಿರ್ವಹಣೆ; ಕ್ಷೇತ್ರ ವಿಸ್ತರಣಾ ಕೆಲಸಗಾರರಿಗೆ ತರಬೇತಿ ಕಾರ್ಯಕ್ರಮಗಳು ಮತ್ತು ಸಂಶೋಧನೆ ಮತ್ತು ಪ್ರಾಯೋಗಿಕ ಕೇಂದ್ರಗಳು ಹಾಗೂ ಅದರ ಪ್ರಾದೇಶಿಕ ಅಧಿಕಾರ ಕ್ಷೇತ್ರವ್ಯಾಪ್ತಿಯೊಳಗಿನ ವಿವಿಧ ಭಾಗಗಳಲ್ಲಿ ಅಗತ್ಯಪಡಿಸಬಹುದಾಧ ಅಂಥ ಕೇಂದ್ರಗಳ ಸ್ಥಾಪನೆ, ಅಭಿವೃದ್ಧಿ ಮತ್ತು ಕಾರ್ಯಾಚರಣೆ ನಡೆಸುವ ಜವಾಬ್ದಾರಿ ಪ್ರತಿಯೊಂದು ವಿಶ್ವವಿದ್ಯಾಲಯದ್ದಾಗಿರತಕ್ಕದ್ದು."

**4. ಪ್ರಕರಣ 7ರ ತಿದ್ದುಪಡಿ.-** ಮೂಲ ಅಧಿನಿಯಮದ 7ನೇ ಪ್ರಕರಣದಲ್ಲಿ, (19)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು. ಎಂದರೆ:-

"(20) ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ (AI), ಹವಾಮಾನ ಸ್ಮಾರ್ಟ್ ಕೃಷಿ, ಅಂತರಾಷ್ಟ್ರೀಯ ಕೃಷಿ ಮಾರಾಟ, ಮೌಲ್ಯವರ್ಧನೆ, ಉದ್ಯಮಶೀಲತೆ ಮತ್ತು ಕೃಷಿ-ನವೋದ್ಯಮಗಳು, ಇತ್ಯಾದಿಗಳಂತಹ ಕೃಷಿ ಮತ್ತು ಸಂಬಂಧಿತ ವಿಷಯಗಳಿಗೆ ಸಂಬಂಧಪಟ್ಟಂತೆ ಹೊಸ ವಿಷಯಗಳು ಅಥವಾ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸುವುದು ಅಥವಾ ಪರಿಚಯಿಸುವುದು."

**5. ಪ್ರಕರಣ 9ಎ ಸೇರ್ಪಡೆ.-** ಮೂಲ ಅಧಿನಿಯಮದ 9ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"9ಎ. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯಕ್ಕೆ ಕೆಲವು ಕಾಲೇಜುಗಳು ಮತ್ತು ಸಂಸ್ಥೆಗಳ ವರ್ಗಾವಣೆ.-** ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ, 2025ರ ಪ್ರಾರಂಭಕ್ಕೆ ಪ್ರಾರಂಭದ ದಿನಾಂಕದಂದು ಮತ್ತು ದಿನಾಂಕದಿಂದ,-

(1) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ಇವುಗಳ ಒಡೆತನ ಅಥವಾ ನಿರ್ವಹಣೆಯಲ್ಲಿರುವ ಎಲ್ಲಾ ಕಾಲೇಜುಗಳು, ಸಂಶೋಧನಾ ಕೇಂದ್ರ, ವಿಸ್ತರಿತ ಶಿಕ್ಷಣ ಘಟಕ, ಇತರ ಸಂಸ್ಥೆಗಳಿಗೆ ಹೊಂದಿಕೊಂಡಿರುವ ವಿದ್ಯಾರ್ಥಿನಿಲಯಗಳು, ಇತರ ಕಟ್ಟಡಗಳು, ಅವುಗಳೊಂದಿಗಿನ ಪೀಠೋಪಕರಣ ಸಾಮಗ್ರಿಗಳು, ಗ್ರಂಥಾಲಯಗಳು, ಪುಸ್ತಕಗಳು, ಪ್ರಯೋಗಾಲಯಗಳು, ದಾಸ್ತಾನುಗಳು, ಉಪಕರಣಗಳು, ಸಲಕರಣೆಗಳು, ಪರಿಕರಗಳು ಮತ್ತು ಸಾಧನಗಳು ಹಾಗೂ ಎಲ್ಲಾ ಇತರ ಚರ ಮತ್ತು ಸ್ಥಿರ ಎರಡೂ ಸ್ವತ್ತುಗಳೊಂದಿಗೆ, ಮೈಸೂರು, ಮಂಡ್ಯ, ಚಾಮರಾಜನಗರ, ಹಾಸನ ಮತ್ತು ಕೊಡಗು ಜಿಲ್ಲೆಗಳೊಳಗೆ ನೆಲೆಗೊಂಡಿರುವ ಎಲ್ಲಾ ಸ್ವತ್ತುಗಳು, ಮಾನವ ಸಂಪನ್ಮೂಲ, ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಹಾಗೂ ಬಾಧ್ಯತೆಗಳೊಂದಿಗೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ ಇಲ್ಲಿಗೆ ವರ್ಗಾವಣೆಯಾಗಿರುವುದಾಗಿ ಮತ್ತು ನಿಹಿತವಾಗಿರುವುದಾಗಿ ಭಾವಿಸತಕ್ಕದ್ದು:

ಪರಂತು, ರಾಜ್ಯ ಸರ್ಕಾರವು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ ಇದಕ್ಕೆ ಅನುದಾನವನ್ನು ನೀಡಬಹುದು;

(2) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ, 2025ರ ಪ್ರಾರಂಭಕ್ಕೆ ಮೊದಲು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ ಇಲ್ಲಿಗೆ ವರ್ಗಾವಣೆಗೊಂಡ ಕಾಲೇಜುಗಳಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ಇವುಗಳಲ್ಲಿ ಯಾವುದೇ ಪರೀಕ್ಷೆಗೆ ವ್ಯಾಸಂಗ ಮಾಡುತ್ತಿರುವ ಯಾವೊಬ್ಬ ವಿದ್ಯಾರ್ಥಿಗೆ ಅತನ ಅಥವಾ ಆಕೆಯ ವ್ಯಾಸಂಗ ಕ್ರಮವನ್ನು ಪೂರ್ಣಗೊಳಿಸಲು ಅನುಮತಿ ನೀಡತಕ್ಕದ್ದು ಮತ್ತು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯವು ಆ ವಿಶ್ವವಿದ್ಯಾಲಯದ ಪಠ್ಯಕ್ರಮಗಳ ಅನುಸಾರವಾಗಿ ನಿಯಮಿಸಬಹುದಾದಂಥ ಅವಧಿಗಾಗಿ ಅಂಥ ವಿದ್ಯಾರ್ಥಿಗಳಿಗೆ ಪರೀಕ್ಷೆಗಳನ್ನು ನಡೆಸಲು ಏರ್ಪಾಡುಗಳನ್ನು ಮಾಡತಕ್ಕದ್ದು;

(3) ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ಇವು ಯಾವುದೇ ಪರೀಕ್ಷೆಯನ್ನು ನಡೆಸಿದ್ದು, ಅದರ ಫಲಿತಾಂಶಗಳನ್ನು ಘೋಷಿಸಿರದಿದ್ದರೆ, ಕೋರ್ಸಿನ ಅಗತ್ಯತೆಗಳನ್ನು ಪ್ರದತ್ತಗೊಳಿಸಿದ್ದು ಅಥವಾ ಜರುಗಿಸಿದ್ದು ಅಥವಾ ಅಂಥ ಪರೀಕ್ಷೆಯ ಫಲಿತಾಂಶಗಳನ್ನು ಘೋಷಿಸಿರದಿದ್ದರೆ, ಕೋರ್ಸಿನ ಅಗತ್ಯತೆಗಳನ್ನು ಪೂರೈಸಿದ್ದರೆ, ಆಗ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ಇವು ಫಲಿತಾಂಶವನ್ನು ಘೋಷಿಸಬಹುದು ಮತ್ತು ಪದವಿಯನ್ನು ಪ್ರದಾನ ಮಾಡಬಹುದು;

(4) ಈ ಅಧಿನಿಯಮವು ಪ್ರಾರಂಭವಾಗುವ ದಿನಾಂಕಕ್ಕೆ ಮೊದಲು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ ಇದರ ಪ್ರಾದೇಶಿಕ ಅಧಿಕಾರ ಕ್ಷೇತ್ರವ್ಯಾಪ್ತಿಯೊಳಗೆ ಇರುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ಇವುಗಳ ಯಾವುದೇ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಅಥವಾ ಅದಕ್ಕೆ ಸೇರಿರುವ ಯಾವೊಬ್ಬ ಅಧ್ಯಾಪಕ ಮತ್ತು ಇತರ ಸಿಬ್ಬಂದಿಯು ಅಂಥ ದಿನಾಂಕದಿಂದಲೇ ಕೃಷಿ ವಿಶ್ವವಿದ್ಯಾಲಯ, ಮಂಡ್ಯ ಇದರ ಯುಕ್ತ ವೃಂದ ಅಥವಾ ಹುದ್ದೆಗಳ ವರ್ಗಗಗಳಿಗೆ ವರ್ಗಾವಣೆಗೊಳ್ಳತಕ್ಕದ್ದು:

ಪರಂತು, ಹಾಗೆ ವರ್ಗಾವಣೆಗೊಂಡ ಯಾವೊಬ್ಬ ಅಧ್ಯಾಪಕ ಅಥವಾ ಇತರ ಸಿಬ್ಬಂದಿಯು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ ಅಥವಾ ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದ ಆರು ತಿಂಗಳಿಗೆ ಮೀರದ ಅಂಥ ಮುಂದುವರೆದ ಅವಧಿಯೊಳಗೆ ರಾಜ್ಯ ಸರ್ಕಾರಕ್ಕೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ಇಲ್ಲಿಗೆ ವರ್ಗಾವಣೆಯನ್ನು ಕೋರಿ ಅರ್ಜಿ ಸಲ್ಲಿಸಬಹುದು ಮತ್ತು ಇದರ ಬಗ್ಗೆ ಕುಲಪತಿ ಮತ್ತು ರಾಜ್ಯ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು;

(5) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ ಇಲ್ಲಿಗೆ ವರ್ಗಾವಣೆ ಬಯಸಿದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ಇವುಗಳ ಯಾವೊಬ್ಬ ಅಧ್ಯಾಪಕ ಅಥವಾ ಇತರ ಸಿಬ್ಬಂದಿಯು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಅಥವಾ ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದ ಆರು ತಿಂಗಳು ಮೀರದ ಅಂಥ ಮುಂದುವರೆದ ಅವಧಿಯೊಳಗೆ ರಾಜ್ಯ ಸರ್ಕಾರಕ್ಕೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ ಇಲ್ಲಿಗೆ ವರ್ಗಾವಣೆಯನ್ನು ಕೋರಿ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಇದರ ಬಗ್ಗೆ ಕುಲಪತಿ ಮತ್ತು ರಾಜ್ಯ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು; ಮತ್ತು

(6) ರಾಜ್ಯ ಸರ್ಕಾರವು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ಹಾಗೂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯದ ಕುಲಪತಿಯವರೊಡನೆ ಸಮಾಲೋಚಿಸಿ, ಈ ವಿಶ್ವವಿದ್ಯಾಲಯಗಳಲ್ಲಿ ಹೆಚ್ಚುವರಿಯಾಗಿ ಇರುವ ಬೋಧನಾ ಮತ್ತು ಇತರ ಸಿಬ್ಬಂದಿಯು ಯಾರಾದರೂ ಇದ್ದರೆ, ಅದನ್ನು ನಿರ್ಧರಿಸಿ, ಹಾಗೆ ಹೆಚ್ಚುವರಿಯಾಗಿ ಇರುವ ಸಿಬ್ಬಂದಿಯನ್ನು ಸಂದರ್ಭಾನುಸಾರ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ಅಥವಾ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ ಇಲ್ಲಿಗೆ ತಾನು ಯುಕ್ತವೆಂದು ಪರಿಗಣಿಸಬಹುದಾದ ಅಂಥ ತತ್ವಗಳು ಮತ್ತು ಕಾರ್ಯವಿಧಾನಗಳನ್ನು ಅನುಸರಿಸಿದ ತರುವಾಯ ವರ್ಗಾಯಿಸಬಹುದು.

**6. ಪ್ರಕರಣ 12ರ ತಿದ್ದುಪಡಿ.-** ಮೂಲ ಅಧಿನಿಯಮದ 12ನೇ ಪ್ರಕರಣದ (2)ನೇ ಉಪಪ್ರಕರಣದ, (vi)ನೇ ಖಂಡದಲ್ಲಿ "ಶಿವಮೊಗ್ಗದಲ್ಲಿನ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ

ವಿಶ್ವವಿದ್ಯಾಲಯಕ್ಕೆ," ಎಂಬ ಪದಗಳು ಅಲ್ಪ ವಿರಾಮ ಚಿಹ್ನೆಯ ತರುವಾಯ "ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ ಇಲ್ಲಿಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

**7. ಪ್ರಕರಣ 27ರ ತಿದ್ದುಪಡಿ.-** ಮೂಲ ಅಧಿನಿಯಮದ 27ನೇ ಪ್ರಕರಣದಲ್ಲಿ,-

(i) ಉಪಪ್ರಕರಣ (4ಎ) ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(4ಬಿ) ಉಪ-ಪ್ರಕರಣ (3)ರಲ್ಲಿ ಏನೇ ಒಳಗೊಂಡಿದ್ದರೂ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯದ ಮೊದಲ ಕುಲಪತಿಯನ್ನು ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇರೆಗೆ ಕುಲಾಧಿಪತಿಯು ನೇಮಕ ಮಾಡತಕ್ಕದ್ದು."

**8. ಪ್ರಕರಣ 67ರ ತಿದ್ದುಪಡಿ.-** ಮೂಲ ಅಧಿನಿಯಮದ 67ನೇ ಪ್ರಕರಣದ (2)ನೇ ಉಪಪ್ರಕರಣದ (ಇ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎಫ್) ಹೊಸದಾಗಿ ಸ್ಥಾಪಿಸಲಾದ ಯಾವುದೇ ವಿಶ್ವವಿದ್ಯಾಲಯದ ವಿಶೇಷಾಧಿಕಾರಿ."

**9. ಪ್ರಕರಣ 68ರ ತಿದ್ದುಪಡಿ.-** ಮೂಲ ಅಧಿನಿಯಮದ 68ನೇ ಪ್ರಕರಣದ (1)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1ಎ) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯಕ್ಕಾಗಿ ಹೊಸ ಪರಿನಿಯಮಗಳನ್ನು ರೂಪಿಸುವವವರೆಗೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಇದರ ಪರಿನಿಯಮಗಳನ್ನು ಅನುಸರಿಸತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
### (ವಿಧೇಯಕವನ್ನು ಮಂಡಿಸಿದಾಗ ಲಗತ್ತಿಸಿದಂತೆ)

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ಇಲ್ಲಿಂದ ಕಾಲೇಜುಗಳು, ಸಂಶೋಧನಾ ಸಂಸ್ಥೆಗಳು, ವಿಸ್ತರಣಾ ಶಿಕ್ಷಣ ಘಟಕಗಳು, ಪ್ರಯೋಗಾಲಯಗಳು, ಗ್ರಂಥಾಲಯಗಳು, ವಿದ್ಯಾರ್ಥಿನಿಲಯಗಳು ಮುಂತಾದವುಗಳ ವರ್ಗಾಯಿಸುವುದರ ಮೂಲಕ ಮಂಡ್ಯ, ಹಾಸನ, ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಲ್ಲಿ ಬೆಳೆಗಳ ಉತ್ಪಾದನೆಯ ಕ್ಷೇತ್ರದಲ್ಲಿ ಅಧ್ಯಯನ, ಸಂಶೋಧನೆ ಮತ್ತು ವಿಸ್ತರಣೆಯನ್ನು ನಡೆಸಲು ಮಂಡ್ಯದ ವಿ.ಸಿ. ಫಾರ್ಮ್‌ನಲ್ಲಿ ಪ್ರತ್ಯೇಕ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಕ್ಕಾಗಿ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 2009 (2010ರ ಕರ್ನಾಟಕ ಅಧಿನಿಯಮ 10)ನ್ನು ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಎರಡು ನೂರಾ ಎಂಬತ್ತೇಳು ಕೋಟಿ ರೂಪಾಯಿಗಳ ವೆಚ್ಚವನ್ನು ಒಳಗೊಳ್ಳುವುದು.

**ಪ್ರತ್ಯಾಯೋಜಿತ ಶಾಸನಾಧಿಕಾರದ ಕುರಿತು ಜ್ಞಾಪನ ಪತ್ರ**

| | |
|---|---|
| **ಖಂಡ-6** | 6ನೇ ಖಂಡದ ಮೂಲಕ ಸೇರಿಸಲು ಉದ್ದೇಶಿಸಿರುವ 9ಎ ಪ್ರಕರಣದ (2)ನೇ ಉಪ-ಪ್ರಕರಣವು ಪರಿಕ್ಷೆಗಳನ್ನು ನಡೆಸುವುದಕ್ಕಾಗಿನ ವ್ಯಯವಸ್ಥೆಗಳ ಕುರಿತು ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಎನ್. ಚಲುವರಾಯಸ್ವಾಮಿ**
ಕೃಷಿ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

# ಅನುಬಂಧ
## ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009
## (2010ರ ಕರ್ನಾಟಕ ಅಧಿನಿಯಮ ಸಂಖ್ಯೆ: 10)ರ ಉದ್ಧೃತ ಭಾಗ

**XX XX XX**

**3. ವಿಶ್ವವಿದ್ಯಾಲಯಗಳ ಸ್ಥಾಪನೆ ಮತ್ತು ನಿಗಮನ.-** (1) ಕರ್ನಾಟಕ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 1963ರ (1963ರ ಕರ್ನಾಟಕ ಅಧಿನಿಯಮ 22) 3ನೇ ಪ್ರಕರಣದಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯಗಳು ಈ ಮುಂದಿನಂತೆ ಉಪಬಂಧ ಕಲ್ಪಿಸಿರುವಂತೆ ತಮ್ಮ ಪ್ರಾದೇಶಿಕ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಡನೆ ಈ ಅಧಿನಿಯಮದಡಿಯಲ್ಲಿ ಸ್ಥಾಪನೆಯಾಗಿವೆ ಎಂದು ಭಾವಿಸತಕ್ಕದ್ದು ಎಂದರೆ:-

(ಎ) ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು (ಗ್ರಾಮಾಂತರ), ಬೆಂಗಳೂರು (ನಗರ), ರಾಮನಗರಂ, ಮಂಡ್ಯ, ತುಮಕೂರು, ಮೈಸೂರು, ಚಾಮರಾಜನಗರ, ಹಾಸನ, [XXX] ಜಿಲ್ಲೆಗಳಿಗೆ ವಿಸ್ತರಿಸಿದ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಂದಿಗೆ ಬೆಂಗಳೂರಿನಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿರುವ ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ;

(ಬಿ) ಬಾಗಲಕೋಟೆ, ಬೆಳಗಾಂ, ಬಳ್ಳಾರಿ, ಬೀದರ್, ಬಿಜಾಪುರ, ಧಾರವಾಡ, ಗದಗ, ಗುಲ್ಬರ್ಗಾ, ಹಾವೇರಿ, ಕೊಪ್ಪಳ, ರಾಯಚೂರು ಮತ್ತು ಉತ್ತರಕನ್ನಡ ಜಿಲ್ಲೆಗಳಿಗೆ ವಿಸ್ತರಿಸಿದ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಂದಿಗೆ ಧಾರವಾಡದಲ್ಲಿ ಕೇಂದ್ರ ಕಾರ್ಯಸ್ಥಾನವನ್ನು ಹೊಂದಿರುವ ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ;

(2) ಈ ಅಧಿನಿಯಮವು ಪ್ರಾರಂಭವಾದ ದಿನದಂದು, (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಗುಲ್ಬರ್ಗಾ, ಬೀದರ್, ರಾಯಚೂರು, ಬಳ್ಳಾರಿ, ಕೊಪ್ಪಳ ಜಿಲ್ಲೆಗಳಿಗೆ ವಿಸ್ತರಿಸಲಾದ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಂದಿಗೆ ರಾಯಚೂರಿನಲ್ಲಿ ಕೇಂದ್ರ ಕಾರ್ಯಸ್ಥಾನದೊಂದಿಗೆ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಸ್ಥಾಪನೆಯಾಗತಕ್ಕದ್ದು ಮತ್ತು (1)ನೇ ಉಪಪ್ರಕರಣದ (ಬಿ) ಖಂಡದಡಿಯಲ್ಲಿ ಸ್ಥಾಪನೆಯಾದ ವಿಶ್ವವಿದ್ಯಾಲಯವು ಹೊಂದಿದ್ದ ಆ ಪ್ರದೇಶದ ಮೇಲಿನ ಅಧಿಕಾರ ಕ್ಷೇತ್ರ ವ್ಯಾಪ್ತಿಯು ರದ್ದಾಗತಕ್ಕದ್ದು.

(2ಎ) ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ, ಉಡುಪಿ, ದಕ್ಷಿಣ ಕನ್ನಡ, ಕೊಡಗು ಮತ್ತು ದಾವಣಗೆರೆ ಜಿಲ್ಲೆಗಳ ಮೇಲೆ ಅಧಿಕಾರ ಕ್ಷೇತ್ರ ವ್ಯಾಪಿ ಹೊಂದಿರುವ, ಶಿವಮೊಗ್ಗದಲ್ಲಿ ಕೇಂದ್ರ ಕಾರ್ಯಸ್ಥಾನದೊಂದಿಗೆ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಎಂದು ಕರೆಯಲಾಗುವ ವಿಶ್ವವಿದ್ಯಾಲಯವನ್ನು ಸ್ಥಾಪಿಸತಕ್ಕದ್ದು ಮತ್ತು ಈ ಅಧಿನಿಯಮದಡಿಯಲ್ಲಿ ಸ್ಥಾಪಿಸಿದ ವಿಶ್ವವಿದ್ಯಾಲಯದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಎಲ್ಲಾ ಪ್ರಕಾರ್ಯಗಳನ್ನು ನಿರ್ವಹಿಸಲು ಹೊಣೆಯಾಗಿರತಕ್ಕದ್ದು.

(2ಬಿ) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಅಧಿನಿಯಮ, 2009 ರಲ್ಲಿ ಏನೇ ಒಳಗೊಂಡಿದ್ದರೂ, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗವು (2ಎ) ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಜಿಲ್ಲೆಗಳ ಮೇಲೆ ಅದರ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಳಗೆ, ಸದರಿ ಅಧಿನಿಯಮದಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಎಲ್ಲಾ ಪ್ರಕಾರ್ಯಗಳ ನಿರ್ವಹಣೆಗೆ ಹೊಣೆಯಾಗಿರತಕ್ಕದ್ದು.

**XX XX XX**

**4. ಅಧಿಕಾರ ವ್ಯಾಪ್ತಿ.-** (1) ಕೃಷಿ, ಪಶುಸಂಗೋಪನೆ, ಮೀನುಗಾರಿಕೆ, ರೇಷ್ಮೆ ವ್ಯವಸಾಯ ಮತ್ತು ಅರಣ್ಯ ವಿಜ್ಞಾನ ತರಬೇತಿ ಅಥವಾ ಶಿಕ್ಷಣ ಕೇಂದ್ರಗಳು ಮತ್ತು ಸಂಶೋಧನಾ ಹಾಗೂ ಪ್ರಯೋಗ ಕೇಂದ್ರಗಳ ನಿರ್ವಹಣೆಗೆ ಮತ್ತು ಕ್ಷೇತ್ರ ವಿಸ್ತರಣಾ ಕೆಲಸಗಾರರ ತರಬೇತಿ ಕಾರ್ಯಕ್ರಮಗಳಿಗೆ ಮತ್ತು ತನ್ನ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಳಗೆ ವಿವಿಧ ಭಾಗಗಳಲ್ಲಿ ಅಗತ್ಯವಾಗಬಹುದಾದಂಥ ಇತರ ಕೇಂದ್ರಗಳ ಸ್ಥಾಪನೆ, ಅಭಿವೃದ್ಧಿ ಮತ್ತು ಕಾರ್ಯಾಚರಣೆ ನಡೆಸುವ ಜವಾಬ್ದಾರಿ ಪ್ರತಿಯೊಂದು ವಿಶ್ವವಿದ್ಯಾಲಯದ ಮೇಲಿರತಕ್ಕದ್ದು.

**XX XX XX**

**7. ವಿಶ್ವವಿದ್ಯಾಲಯದ ಅಧಿಕಾರ ಮತ್ತು ಪ್ರಕಾರ್ಯಗಳು.-** ವಿಶ್ವವಿದ್ಯಾಲಯವು ಈ ಮುಂದಿನ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:-

(1) ಕೃಷಿ ಮತ್ತು ಸಂಬಂಧಿತ ಇತರ ಕಲಿಕೆಯ ವಿಭಾಗಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವು ಸೂಕ್ತ ಎಂದು ಭಾವಿಸಬಹುದಾದ ಶಿಕ್ಷಣವನ್ನು ಒದಗಿಸುವುದು;

(2) ಕೃಷಿ ಮತ್ತು ಸಂಬಂಧಿತ ಕಲಿಕೆಯ ವಿಭಾಗಗಳಲ್ಲಿ ಸಂಶೋಧನೆಯನ್ನು ನಡೆಸುವುದಕ್ಕೆ ಅವಕಾಶವನ್ನು ನೀಡುವುದು.

(3) ಸಂಶೋಧನೆಯಿಂದ ತಿಳಿದುಬಂದ ವಿಷಯಗಳನ್ನು ಮತ್ತು ತಾಂತ್ರಿಕ ಮಾಹಿತಿಗಳನ್ನು ವಿಸ್ತರಣಾ ಶೈಕ್ಷಣಿಕ ಕಾರ್ಯಕ್ರಮಗಳ ಮೂಲಕ ಪ್ರಸಾರ ಮಾಡಲು ಅವಕಾಶ ಕಲ್ಪಿಸುವುದು;

(4) ಯಾವುದೇ ಇತರ ವಿಶ್ವವಿದ್ಯಾಲಯದಲ್ಲಿ ಅಥವಾ ಈ ಉದ್ದೇಶಕ್ಕಾಗಿ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಅರೆಕಾಲಿಕ ವ್ಯಾಸಂಗ ಕ್ರಮ ಮತ್ತು / ಅಥವಾ ಸಂಶೋಧನೆಯು ಸೇರಿದಂತೆ ವಿಶ್ವವಿದ್ಯಾಲಯದಲ್ಲಿ ನಿಯಮಿಸಿದ ವ್ಯಾಸಂಗ ಕ್ರಮ ಅಥವಾ ಸಂಶೋಧನೆ ಅಥವಾ ಅವೆರಡನ್ನೂ ಮಾಡಿರುವ ವ್ಯಕ್ತಿಗಳಿಗೆ ಪದವಿಗಳು, ಡಿಪ್ಲೋಮಗಳು ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳಿಗಾಗಿ ವ್ಯಾಸಂಗ ಕ್ರಮಗಳನ್ನು ಪ್ರಾರಂಭಿಸುವುದು ಮತ್ತು ಪರೀಕ್ಷೆಗಳನ್ನು ನಡೆಸುವುದು ಮತ್ತು ಪದವಿ, ಡಿಪ್ಲೋಮಾ ಮತ್ತಿತರ ಶೈಕ್ಷಣಿಕ ಪ್ರಶಸ್ತಿ ನೀಡುವುದು;

(5) ನಿಯಮಿಸಬಹುದಾದಂಥ ಗೌರವ ಪದವಿಗಳು ಮತ್ತು ಇತರ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(6) ರೈತರಿಗೆ, ಕ್ಷೇತ್ರ ಕೆಲಸಗಾರರಿಗೆ, ಗ್ರಾಮೀಣ ಯುವಕರಿಗೆ ಮತ್ತು ವಿಶ್ವವಿದ್ಯಾಲಯದಲ್ಲಿ ಕ್ರಮಬದ್ಧ ವಿದ್ಯಾರ್ಥಿಗಳಾಗಿ ಭರ್ತಿಯಾಗಿರದ ಇತರ ವ್ಯಕ್ತಿಗಳಿಗೆ ತರಬೇತಿಯನ್ನು ನೀಡುವುದು;

(7) 4ನೇ ಪ್ರಕರಣದಲ್ಲಿ ನಮೂದಿಸಿರುವ ಮಿತಿಗಳಿಗೊಳಪಟ್ಟು, ವಿಶ್ವವಿದ್ಯಾಲಯವು ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಇತರ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳೊಡನೆ ಜೊತೆಗೂಡಿ ಕೆಲಸಮಾಡುವುದು;

(8) ಕೃಷಿ, ಗೃಹವಿಜ್ಞಾನ, ಕೃಷಿ ಇಂಜಿನಿಯರಿಂಗ್, ಅರಣ್ಯ ವಿಜ್ಞಾನ ಮತ್ತು ಸಂಬಂಧಿತ ವಿಜ್ಞಾನಗಳಿಗೆ ಸಂಬಂಧಿಸಿದ ಕಾಲೇಜುಗಳು ಮತ್ತು ಇತರ ಸಂಸ್ಥೆಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(9) ಬೋಧನೆ, ಸಂಶೋಧನೆ ನಡೆಸಲು ಮತ್ತು ವಿಸ್ತರಣಾ ಶಿಕ್ಷಣಕ್ಕಾಗಿ ಪ್ರಯೋಗಾಲಯಗಳು, ಗ್ರಂಥಾಲಯಗಳು, ಸಂಶೋಧನಾ ಕೇಂದ್ರಗಳು ಮತ್ತು ಸಂಸ್ಥೆಗಳು ಮತ್ತು ವಸ್ತುಸಂಗ್ರಹಾಲಯಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(10) ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಶಿಕ್ಷಣಕ್ಕಾಗಿ ಹುದ್ದೆಗಳನ್ನು ಸೃಜಿಸುವುದು ಮತ್ತು ಅಂಥ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಿಸುವುದು;

(11) ಆಡಳಿತಾತ್ಮಕವಾದ ಮತ್ತು ಇತರ ಹುದ್ದೆಗಳನ್ನು ಸೃಜಿಸುವುದು ಮತ್ತು ಅಂಥ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಕ ಮಾಡುವುದು;

(12) ಶಾಸನಗಳನ್ವಯ ಫೆಲೋಶಿಪ್, ವಿದ್ಯಾರ್ಥಿವೇತನಗಳು, ಸ್ಟೈರಿÉಪೆಂಡುಗಳು ಮತ್ತು ಬಹುಮಾನಗಳನ್ನು ಸ್ಥಾಪಿಸುವುದು ಮತ್ತು ನೀಡುವುದು;

(13) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ನಿವಾಸ ಗೃಹಗಳನ್ನು ನಿರ್ಮಿಸುವುದು ಮತ್ತು ನಿರ್ವಹಿಸಿಕೊಂಡು ಬರುವುದು;

(14) ನಿಯಮಿಸಲಾದಂಥ ಫೀಜು ಮತ್ತು ಇತರೆ ಚಾರ್ಜುಗಳನ್ನು ನಿಗದಿಪಡಿಸುವುದು, ಕೋರುವುದು ಮತ್ತು ಸ್ವೀಕರಿಸುವುದು;

(15) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ನಿವಾಸ ನಡತೆ ಮತ್ತು ಶಿಸ್ತನ್ನು ಮೇಲ್ವಿಚಾರಣೆ ಮಾಡುವುದು ಮತ್ತು ನಿಯಂತ್ರಿಸುವುದು ಹಾಗೂ ಅವರ ಆರೋಗ್ಯ ಮತ್ತು ಕ್ಷೇಮಾಭಿವೃದ್ಧಿಯನ್ನು ವರ್ಧಿಸುವುದಕ್ಕಾಗಿ ಏರ್ಪಾಡುಗಳನ್ನು ಮಾಡುವುದು;

(16) ವಿದೇಶಗಳಿಂದ ಮತ್ತು ದೇಶದ ಒಳಗಿನಿಂದ ವಂತಿಗೆಗಳನ್ನು ಸ್ವೀಕರಿಸುವುದು:

ಪರಂತು, ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದ ಹೊರತು ವಿಶ್ವವಿದ್ಯಾಲಯವು ವಿದೇಶದಿಂದ, ವಿದೇಶಿ ಪ್ರತಿಷ್ಠಾನಗಳು ಮತ್ತು ಅಂಥ ದೇಶದ ಯಾವುದೇ ವ್ಯಕ್ತಿಯಿಂದ ವಂತಿಗೆಗಳನ್ನು ಸ್ವೀಕರಿಸತಕ್ಕದ್ದಲ್ಲ.

(17) ಭಾರತದ ಹೊರಗೆ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ತನ್ನ ವಿಶೇಷಾಧಿಕಾರಕ್ಕೆ ಪ್ರವೇಶಾವಕಾಶವನ್ನು ನೀಡಲು ವಿಶ್ವವಿದ್ಯಾಲಯಕ್ಕೆ ಅನುಮತಿಸುವುದು;

(18) ವಿವಿಧ ಶಾಸನಗಳಡಿಯಲ್ಲಿ ನಿರ್ಧರಿಸಿದಂತೆ ಕೃಷಿ ಮತ್ತು ಸಂಬAಧಿತ ವಿeಇÁನಗಳಲ್ಲಿ ಕಲಿಕೆಯನ್ನು ನಡೆಸಲು ಖಾಸಗಿ ಕೃಷಿ ಸಂಸ್ಥೆಗಳಿಗೆ ಸಂಯೋಜನೆ ನೀಡುವುದು.

(19) ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳ ಪುರೋಭಿವೃದ್ಧಿಗೆ ಅಗತ್ಯವಾಗಬಹುದಾದ ಎಲ್ಲಾ ಚಟುವಟಿಕೆಗಳ ಮತ್ತು ಕಾರ್ಯಗಳನ್ನು ಅವು ಮೇಲೆ ಹೇಳಿದ ಅಧಿಕಾರಗಳಿಗೆ ಪ್ರಾಸಂಗಿಕವಾಗಿರಲಿ ಇಲ್ಲದಿರಲಿ ಮಾಡುವುದು:

**XX XX XX**

**9. ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಕೆಲವು ಕಾಲೇಜುಗಳು ಮತ್ತು ಸಂಸ್ಥೆಗಳ ವರ್ಗಾವಣೆ.-** ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಮತ್ತು ಅಂದಿನಿಂದ ಪ್ರಾರಂಭಿಸಿ,-

(ಎ) ಈ ಅಧಿನಿಯಮವು ಪ್ರಾರಂಭವಾಗುವ ಪೂರ್ವದಲ್ಲಿ ಹಾಗೂ 3ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಿರುವ ವಿಶ್ವವಿದ್ಯಾಲಯದ ಒಡೆತನದಲ್ಲಿರುವ ಮತ್ತು ನಿರ್ವಹಣೆಯಲ್ಲಿರುವ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರಾದೇಶಿಕ ಅಧಿಕಾರ

ವ್ಯಾಪ್ತಿಯೊಳಗೆ ಇರುವ, ಎಲ್ಲಾ ಕಾಲೇಜುಗಳು, ಲಗತ್ತಾದ ಹಾಸ್ಟೆಲುಗಳು, ಪೀಠೋಪಕರಣಗಳ ವಸ್ತುಗಳೊಡನೆ ಇತರ ಕಟ್ಟಡಗಳು, ಗ್ರಂಥಾಲಯಗಳು, ಪುಸ್ತಕಗಳು, ಪ್ರಯೋಗಾಲಯಗಳು, ಉಗ್ರಾಣಗಳು, ಉಪಕರಣಗಳು, ಸಲಕರಣೆಗಳು, ಪರಿಕರಗಳು ಮತ್ತು ಸಾಧನ ಸಾಮಗ್ರಿ ಹಾಗೂ ಎಲ್ಲಾ ಇತರ ಚರ ಮತ್ತು ಸ್ಥಿರ ಎರಡೂ ಸ್ವತ್ತುಗಳು, ಸಂಶೋಧನೆಯ ಮತ್ತು ಇತರ ಸಂಸ್ಥೆಗಳು, ಎಲ್ಲಾ ಸ್ವತ್ತು ಹಕ್ಕುಗಳು, ಆಸ್ತಿ ಹಕ್ಕುಗಳು, ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳೊಂದಿಗೆ ರಾಯಚೂರಿನ ಕೃಷಿ ವಿe್ಇÁನಗಳ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗೊಳ್ಳತಕ್ಕದ್ದು ಮತ್ತು ಅದರಲ್ಲಿ ನಿಹಿತಗೊಳ್ಳತಕ್ಕದ್ದು:

ಪರಂತು, ರಾಜ್ಯ ಸರ್ಕಾರವು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ರಾಯಚೂರಿನಲ್ಲಿ ಕ್ಯಾಂಪಸನ್ನು ಅಭಿವೃದ್ಧಿಪಡಿಸುವುದಕ್ಕಾಗಿ ತಾನು ಸರಿಯೆಂದು ಭಾವಿಸಬಹುದಾದಂಥ ಹೆಚ್ಚುವರಿ ಅಭಿವೃದ್ಧಿ ಅನುದಾನವನ್ನು ನೀಡಬಹುದು.

(ಬಿ) (i) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ, ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗೊಂಡ ಕಾಲೇಜುಗಳಲ್ಲಿ 3ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಿದ ವಿಶ್ವವಿದ್ಯಾಲಯದಲ್ಲಿ ಯಾವುದೇ ಪರೀಕ್ಷೆಗೆ ವ್ಯಾಸಂಗ ಮಾಡುತ್ತಿರುವ ಯಾವೊಬ್ಬ ವಿದ್ಯಾರ್ಥಿಗೆ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಲ್ಲಿ ತನ್ನ ವ್ಯಾಸಂಗ ಕ್ರಮವನ್ನು ಪೂರ್ಣಗೊಳಿಸಲು ಅನುಮತಿ ನೀಡತಕ್ಕದ್ದು ಮತ್ತು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಆ ವಿಶ್ವವಿದ್ಯಾಲಯದ ಪಠ್ಯಕ್ರಮಗಳ ಅನುಸಾರವಾಗಿ ನಿಯಮಿಸಬಹುದಾದಂಥ ಅವಧಿಯವರೆಗೆ ಅಂಥ ವಿದ್ಯಾರ್ಥಿಗಳಿಗಾಗಿ ಪರೀಕ್ಷೆಗಳನ್ನು ನಡೆಸಲು ಏರ್ಪಾಡುಗಳನ್ನು ಮಾಡತಕ್ಕದ್ದು.

(ii) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ, 3ನೇ ಪ್ರಕರಣದ (1)ನೇ ಉಪ-ಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ವಿಶ್ವವಿದ್ಯಾಲಯವು, ಯಾವುದೇ ಪರೀಕ್ಷೆಯನ್ನು ನಡೆಸಿದ್ದು, ಕೋರ್ಸಿನ ಅಗತ್ಯತೆಗಳನ್ನು ಪೂರೈಸಿದ್ದು ಅಂಥ ಪರೀಕ್ಷೆಯ ಫಲಿತಾಂಶಗಳನ್ನು ಘೋಷಿಸಿರದಿದ್ದರೆ, ಆಗ ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಫಲಿತಾಂಶವನ್ನು ಘೋಷಿಸಬಹುದು ಮತ್ತು ಪದವಿಯನ್ನು ಪ್ರದಾನ ಮಾಡಬಹುದು.

(ಸಿ) ಈ ಅಧಿನಿಯಮವು ಪ್ರಾರಂಭವಾಗುವ ದಿನಾಂಕಕ್ಕಿಂತ ಮುಂಚೆ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಧಿಕಾರ ಕ್ಷೇತ್ರ ವ್ಯಾಪ್ತಿಯೊಳಗೆ ಇರುವ 3ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ವಿಶ್ವವಿದ್ಯಾಲಯದ ಯಾವುದೇ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಅಥವಾ ಅದಕ್ಕೆ ಲಗತ್ತಾದ ಯಾವೊಬ್ಬ ಅಧ್ಯಾಪಕ ಮತ್ತು ಇತರ ಸಿಬ್ಬಂದಿಯು ಆ ದಿನಾಂಕದಿಂದಲೇ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿನ ಸಮುಚಿತ ಕೇಡರ್ ಅಥವಾ ಹುದ್ದೆಗಳ ಶ್ರೇಣಿಗಳಿಗೆ ವರ್ಗಾವಣೆಗೊಳ್ಳತಕ್ಕದ್ದು:

ಪರಂತು, ಹಾಗೆ ವರ್ಗಾವಣೆಗೊಂಡ ಯಾವೊಬ್ಬ ಅಧ್ಯಾಪಕರು ಅಥವಾ ಇತರ ಸಿಬ್ಬಂದಿಯು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ ಅಥವಾ ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದ ಆರು ತಿಂಗಳಿಗೆ ಮೀರದ ಮುಂದಿನ ಅವಧಿಯ ಒಳಗೆ ರಾಜ್ಯ ಸರ್ಕಾರಕ್ಕೆ ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಯನ್ನು ಕೋರಿ ಅರ್ಜಿ ಸಲ್ಲಿಸಬಹುದು ಮತ್ತು ಇದರ ಬಗ್ಗೆ ರಾಜ್ಯ ಸರ್ಕಾರದ ನಿರ್ಣಯವು ಅಂತಿಮವಾಗಿರತಕ್ಕದ್ದು;

(ಡಿ) ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಬಯಸಿದ ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಯಾವೊಬ್ಬ ಅಧ್ಯಾಪಕ ಅಥವಾ ಇತರ ಸಿಬ್ಬಂದಿಯು ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಅಥವಾ ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ದೇಶಿಸಬಹುದಾದ ಆರು ತಿಂಗಳು ಮೀರದ ಮುಂದಿನ ಅವಧಿಯ ಒಳಗೆ ರಾಜ್ಯ ಸರ್ಕಾರಕ್ಕೆ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಯನ್ನು ಕೋರಿ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಇದರ ಬಗ್ಗೆ ರಾಜ್ಯ ಸರ್ಕಾರದ ನಿರ್ಣಯವು ಅಂತಿಮವಾಗಿರತಕ್ಕದ್ದು;

(ಇ) ರಾಜ್ಯ ಸರ್ಕಾರವು ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮತ್ತು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಯವರೊಡನೆ ಸಮಾಲೋಚಿಸಿ, ಈ ವಿಶ್ವವಿದ್ಯಾಲಯಗಳಲ್ಲಿ ಹೆಚ್ಚುವರಿಯಾಗಿ ಇರುವ ಬೋಧಿಸುವ ಮತ್ತು ಇತರ ಸಿಬ್ಬಂದಿಯು ಯಾರಾದರೂ ಇದ್ದರೆ, ಅದನ್ನು ನಿರ್ಧರಿಸಿ, ಹಾಗೆ ಹೆಚ್ಚುವರಿಯಾಗಿ ಇರುವ ಸಿಬ್ಬಂದಿಯನ್ನು ಸಂದರ್ಭಾನುಸಾರ ಧಾರವಾಡದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಅಥವಾ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ತಾನು ಯುಕ್ತವೆಂದು ಪರಿಗಣಿಸಬಹುದಾದರಿಂದ ತತ್ವಗಳು ಮತ್ತು ಕಾರ್ಯವಿಧಾನಗಳನ್ನು ಅನುಸರಿಸಿದ ತರುವಾಯ ವರ್ಗಾಯಿಸಬಹುದು.

**XX XX XX**

**12. ವ್ಯವಸ್ಥಾಪನಾ ಮಂಡಳಿ ಮತ್ತು ಅದರ ರಚನೆ.-** (1) ಕುಲಾಧಿಪತಿಯವರು ಅದಷ್ಟು ಬೇಗನೆ ವ್ಯವಸ್ಥಾಪನಾ ಮಂಡಳಿಯನ್ನು ರಚಿಸತಕ್ಕದ್ದು.

(2) ವ್ಯವಸ್ಥಾಪನಾ ಮಂಡಳಿಯು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು,-

**XX XX XX**

| | |
|---|---|
| (vi) ಬೆಂಗಳೂರು, ಧಾರವಾಡ, ರಾಯಚೂರು ಇಲ್ಲಿನ ವಿಶ್ವವಿದ್ಯಾಲಯಗಳಲ್ಲಿ ಪ್ರತಿಯೊಂದಕ್ಕೂ ಮತ್ತು ಶಿವಮೊಗ್ಗದಲ್ಲಿನ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ, ಮತ್ತು ಸರದಿಯ ಆಧಾರದ ಮೇಲೆ ಅಧ್ಯಕ್ಷರು ನಾಮನಿರ್ದೇಶನ ಮಾಡಿದ ಕರ್ನಾಟಕ ರಾಜ್ಯ ವಿಧಾನಸಭೆಯ ಮೂವರು ಸದಸ್ಯರು ಮತ್ತು ಸಭಾಪತಿಯವರು ನಾಮನಿರ್ದೇಶನ ಮಾಡಿದ ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿನ ಒಬ್ಬರು ಸದಸ್ಯರು. | ಸದಸ್ಯರು |

**XX XX XX**

**27.ಕುಲಪತಿಯವರು.-**

**XX XX XX**

(4) (3)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮೊದಲ ಕುಲಪತಿಯವರನ್ನು ರಾಜ್ಯ ಸಕಾರದ ಶಿಫಾರಸ್ಸಿನ ಮೇಲೆ ಕುಲಾಧಿಪತಿಯವರು ನೇಮಕ ಮಾಡತಕ್ಕದ್ದು.

(4ಎ) (3)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದ ಮೊದಲ ಕುಲಪತಿಯವರನ್ನು ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇಲೆ ಕುಲಾಧಿಪತಿಯವರು ನೇಮಕ ಮಾಡತಕ್ಕದ್ದು.

**XX XX XX**

**67. ಕೃಷಿ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆಗೆ ರಾಜ್ಯ ಸಮನ್ವಯ ಸಮಿತಿ.-**

**XX XX XX**

(2) ರಾಜ್ಯ ಸಮನ್ವಯ ಸಮಿತಿಯು ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಕೃಷಿ ಪ್ರಭಾರದಲ್ಲಿರುವ ಸಚಿವರು, ಕರ್ನಾಟಕ ಸರ್ಕಾರ ಇವರು ಅಧ್ಯಕ್ಷರಾಗಿರತಕ್ಕದ್ದು;

(ಬಿ) ರಾಜ್ಯದಲ್ಲಿನ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳ ಕುಲಪತಿಯವರು;

(ಸಿ) ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳ ಶಿಕ್ಷಣ, ಸಂಶೋಧನೆ ಮತ್ತು ವಿಸ್ತಾರಣೆ ನಿರ್ದೇಶಕರುಗಳು;

(ಡಿ) ರಾಜ್ಯದಲ್ಲಿಯ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳ ಕುಲಸಚಿವರು;

(ಇ) ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ - ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

**XX XX XX**

**68. ಶಾಸನಗಳ ಮತ್ತು ವಿನಿಯಮಗಳು ಮುಂತಾದವುಗಳ ಮುಂದುವರಿಕೆ.-** (1) ಈ ಅಧಿನಿಯಮದ ಸೂಕ್ತ ಉಪಬಂಧಗಳಡಿಯಲ್ಲಿ ಶಾಸನಗಳು ಅಥವಾ ವಿನಿಯಮಗಳನ್ನು ರಚಿಸುವವರೆಗೆ, ಕರ್ನಾಟಕ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 1963ರ ಉಪಬಂಧಗಳ ಅಡಿಯಲ್ಲಿ ರಚಿಸಿದ ಹಾಗೂ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಜಾರಿಯಲ್ಲಿರುವ ಶಾಸನಗಳು ಮತ್ತು ವಿನಿಯಮಗಳನ್ನು, ಅವು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಿರುವಷ್ಟರ ಮಟ್ಟಿಗೆ ಮತ್ತು ಕುಲಾಧಿಪತಿಯವರ ಅನುಮೋದನೆ ಪಡೆದುಕೊಂಡು ಕುಲಪತಿಯು ಅದರಲ್ಲಿ ಮಾಡಬಹುದಾದಂತಹ ಅಳವಡಿಕೆಗಳು ಅಥವಾ ಮಾರ್ಪಾಡುಗಳಿಗೆ ಒಳಪಟ್ಟು, ಈ ಅಧಿನಿಯಮದ ಸೂಕ್ತ ಉಪಬಂಧಗಳಡಿಯಲ್ಲಿ ವಿಶ್ವವಿದ್ಯಾಲಯವು ರಚಿಸಿದ ಶಾಸನಗಳು ಮತ್ತು ವಿನಿಯಮಗಳೆಂದು ಭಾವಿಸತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದ ದಿನದಂದು, ಕರ್ನಾಟಕ ಕೃಷಿ ವಿಜ್ಞಾನಗಳ ಅಧಿನಿಯಮ, 1963ರ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾಲಯದ ಕುಲಪತಿಗಳ ಪದವನ್ನು ಧಾರಣ ಮಾಡಿದ ವ್ಯಕ್ತಿಯು ಈ ಅಧಿನಿಯಮವನ್ನು ಪ್ರಖ್ಯಾಪಿಸದಿದ್ದರೆ ಎಲ್ಲಿಯವರೆಗೆ ಆತನು ತನ್ನ ಹುದ್ದೆಯನ್ನು ಧಾರಣ ಮಾಡಿರುತ್ತಿದ್ದನೋ ಅಲ್ಲಿಯವರೆಗೆ ಆ ಪದದಲ್ಲಿ ಮುಂದುವರೆಯತಕ್ಕದ್ದು.

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 300, 18ನೇ ಮಾರ್ಚ್ 2025

**KARNATAKA LEGISLATIVE COUNCIL**
**ONE HUNDRED AND FIFTY FIFTH SESSION**

# THE UNIVERSITIES OF AGRICULTURAL SCIENCES (AMENDMENT) BILL, 2025

**(LA Bill No. 19 of 2025)**

**(As passed by the Karnataka Legislative Assembly with Amendments)**

A Bill further to amend the Universities of Agricultural Sciences Act, 2009.

Whereas, it is expedient further to amend the Universities of Agricultural Sciences Act, 2009 (Karnataka Act 10 of 2010) for the purposes hereinafter appearing;

Be it enacted by Karnataka State Legislature in the Seventy sixth year of the Republic of India, as follows:-

**1. Short title and commencement.-** (1) This Act may be called the Universities of Agricultural Sciences (Amendment) Act, 2025.

(2) It shall come in to force at once.

**2. Amendment of section 3.-** In the Universities of Agricultural Sciences Act, 2009 (Karnataka Act 10 of 2010), in section 3,-

(i) in sub-section (1), for clauses (a) and (b), the following shall be substituted, namely:-

"(a) The University of Agricultural Sciences, Bangalore having headquarter at Bangalore with territorial jurisdiction extending over the districts of Kolar, Chikkballapura, Bangalore (Rural), Bangalore (Urban), Ramanagara and Tumkur.

(b) The University of Agricultural Sciences, Dharwad, having headquarter at Dharwad with territorial jurisdiction extending over the districts of Bagalkote, Belgavi, Dharwad, Vijayapura, Gadag, Haveri, and Uttara Kannada.

(c) The University of Agricultural Sciences, Raichur, having headquarter at Raichur with territorial jurisdiction extending over the districts of Bidar, Kalaburagi, Yadgiri, Koppa, Ballari, Vijayanagara and Raichur.

(d) The Keladi Shivappa Nayaka Agricultural and Horticultural Sciences University, Shivamogga, having headquarter at Shivamogga with territorial jurisdiction extending over the districts of Shivamogga, Chikkamagaluru, Udupi, Dakshina Kannada, Davanagere and Chitradurga."

(ii) after sub-section (2B), the following shall be inserted, namely:-

"(2C) Notwithstanding anything contained in sub-sections (1), (2A) and (2B) there shall be established a University called the University of Agricultural Sciences with its headquarters at V.C. Farm, Mandya, with territorial jurisdiction extending over the districts of Mandya, Hassan, Mysuru, Chamarajanagara and Kodagu and shall exercise such powers and shall be responsible for discharge of all the functions of a university established under this Act".

**3. Amendment of section 4.-** In the Principal Act, in section 4, for sub-section (1), the following shall be substituted, namely:-

"(1) Each University shall be responsible for the maintenance of Agriculture, Animal Husbandry, Fishery, Sericulture, Forestry, other agriculture related subjects and Training or Educational Centers; Research and experimental Stations, and for the programme of training of field extension workers and for the establishment, development and operation of such centers as may be required in various parts within its territorial jurisdiction."

**4. Amendment of section 7.-** In the Principal Act, in section 7, after sub-section (19), the following shall be inserted, namely:-

"(20) To start or introduce new subjects or courses related to agriculture and allied subject such as artificial intelligence in agriculture, Climate Smart Agriculture, international agricultural marketing, value addition, entrepreneurship and Agri-Startup etc.,."

**5. Insertion of new section 9A.-** In the Principal Act, after section 9, the following shall be inserted, namely:-

**"9A. Transfer of certain colleges and Institution to the University of Agricultural Sciences, Mandya.-** On and from the date of commencement of the Universities of Agricultural Sciences (Amendment) Act, 2025,-

(1) all Colleges, Research Stations Extension Education Units, other Institutes, attached hostels, other buildings owned and managed by the University of Agricultural Sciences, Bangalore and Keladi Shivappa Nayaka Agricultural and Horticultural Sciences University, Shivamogga together with the articles of furniture, libraries, books, laboratories, stores, instruments, apparatus, appliances and equipment and all other properties both movable and immovable, situated within the districts of Mysuru, Mandya, Chamarajanagar, Hasan and Kodagu shall, along with all properties, Man Power, assets and liabilities and obligations stand, are deemed to be transferred as such to and vest with the University of Agricultural Sciences, Mandya:

Provided that, the State Government may grant to the University of Agricultural Sciences, Mandya;

(2) Any student who was studying for any examination of the University of Agricultural Sciences, Bangalore and Keladi Shivappa Nayaka Agricultural and Horticultural Sciences University, Shivamogga prior to the date of commencement of the Universities of Agricultural Sciences (Amendment) Act, 2025 in the colleges transferred to the University of Agricultural Sciences, Mandya shall be permitted to complete his or her course in the University of Agricultural Sciences, Mandya, which shall make arrangements for holding for such students examinations for such period as may be prescribed in accordance with the curricula of that University;

(3) If the University of Agricultural Sciences, Bangalore and Keladi Shivappa Nayaka Agricultural and Horticultural Sciences University, Shivamogga has prior to the commencement of this Act, held any examination, the result of which have not been declared, though the course requirements are conferred or issued or the results of any such examination have not been declared though the course requirements are completed, then the University of Agricultural Sciences, Bangalore and Keladi Shivappa Nayaka Agricultural and Horticultural Sciences University, Shivamogga may declare the results and confer the degree;

(4) Every teacher and other employees of the University of Agricultural Sciences, Bangalore and Keladi Shivappa Nayaka Agricultural and Horticultural Sciences University, Shivamogga serving in or attached to any of the institutions situated within the territorial jurisdiction of the University of Agricultural Sciences, Mandya before the date of commencement of this Act, shall as from such date stand transferred to the appropriate cadre or category of posts in the University of Agricultural Sciences, Mandya:

provided that any teacher or other employee so transferred may within ninety days or within such further period not exceeding six months as the State Government may by order direct, from the date of commencement of this Act apply to the State Government for transfer to the University of Agricultural Sciences, Bangalore and Keladi Shivappa Nayaka Agricultural and Horticultural Sciences University, Shivamogga and the decision of the Vice Chancellor and State Government thereon shall be final;

(5) Any teacher or other employees of the University of Agricultural Sciences, Bangalore and Keladi Shivappa Nayaka Agricultural and Horticultural Sciences University, Shivamogga who desires to get transferred to the University of Agricultural Sciences, Mandya may within ninety days or within such further period

not exceeding six months as the State Government may be order direct, from the date of commencement of this Act apply to the State Government for transfer to the University of Agricultural Sciences, Mandya and the decision of the Vice Chancellor and State Government thereon shall be final; and

(6) The State Government may in consultation with the Vice-Chancellor of the University of Agricultural Sciences, Bangalore and Keladi Shivappa Nayaka Agricultural and Horticultural Sciences University, Shivamogga and the University of Agricultural Sciences, Mandya determine the excess teaching and other employees, if any, in these Universities and transfer the staff so in excess to the University of Agricultural Sciences, Bangalore and Keladi Shivappa Nayaka Agricultural and Horticultural Sciences University, Shivamogga or the University of Agricultural Sciences, Mandya as the case may after following such principles and procedure as it may consider appropriate."

**6. Amendment of section 12.-** In the Principal Act, in section 12, in sub-section (2), in clause (vi), after the words "Shivamogga" the words "and University of Agricultural Sciences, Mandya", shall be inserted.

**7. Amendment of section 27.-** In the Principal Act, in section 27, after sub-section (4A), the following shall be inserted, namely:-

"(4B) Notwithstanding anything contained in sub-section (3), the first Vice-Chancellor of the University of Agricultural Sciences, Mandya shall be appointed by the Chancellor on the recommendation of the State Government."

**8. Amendment of section 67.-** In the Principal Act, in section 67, in sub-section (2), after clause (e), the following shall be inserted, namely:-

"(f) Special Officer of any newly established University."

**9. Amendment of section 68.-** In the Principal Act, in section 68, after sub-section (1), the following shall be inserted, namely:-

"(1A) The Statutes of the University of Agricultural Sciences, Bangalore will be followed until new Statutes is framed for the University Agricultural Sciences, Mandya."

## STATEMENT OF OBJECTS AND REASONS

**(As appended to at the time of Introduction)**

It is considered necessary to amend the Universities of Agricultural Sciences Act, 2009 (Karnataka Act 10 of 2010) to establish a separate University of Agricultural Sciences at V.C. Farm, Mandya to conduct study, research and extension in the field of crops grown in the districts of Mandya, Hassan, Mysuru, Chamarajanagar and Kodagu by transferring the colleges, Research Institutes, Extension Education Units, Laboratories, Libraries, Hostels etc., from the University of Agricultural Sciences, Bangalore and Keladi Shivappa Nayaka Agricultural and Horticultural Sciences University, Shivamogga.

Hence, the Bill.

**FINANCIAL MEMORANDUM**

There will be an expenditure of two eighty seven crore by the proposed legislative measure.

**MEMORANDUM REGARDING DELEGATED LEGISLATION**

| | |
|---|---|
| Clause 6 | Section 9A sought to be inserted by clause 6, sub-clause (2) empowers the State Government to prescribe the arrangements for conducting examinations. |

The proposed delegation of legislative power is normal in character.

**N. CHELUVARAISWAMY**
Minister for Agriculture

**K.R. MAHALAKSHMI**
Secretary
Karnataka Legislative Council

## ANNEXURE

## EXTRACT FROM THE UNIVERSITIES OF AGRICULTURAL SCIENCES ACT, 2009 (KARNATAKA ACT 10 OF 2010)

**XXX XXX XXX**

**3. Establishment and Incorporation of the Universities.-** (1) The Universities established under section 3 of the Karnataka Universities of Agricultural Sciences Act, 1963, (Karnataka Act 22 of 1963) shall be deemed to have been established under this Act with their territorial jurisdictions as hereinafter provided, namely:-

(a) The University of Agricultural Sciences, Bangalore having headquarter at Bangalore with territorial jurisdiction extending over the districts of Kolar, Chickballapur, Bangalore (Rural), Bangalore (Urban), Ramanagaram, Mandya, Tumkur, Mysore, Chamarajnagar, Hassan, xxx ;

(b) The University of Agricultural Sciences, Dharwad, having headquarter at Dharwad with territorial jurisdiction extending over the districts of Bagalkot, Belgaum, Bellary, Bidar, Bijapur, Dharwad, Gadag, Gulbarga, Haveri, Koppal, Raichur, and Uttara Kannada;

(2) Notwithstanding anything contained in sub-section (1) on the date of commencement of this Act, there shall be established the University of Agricultural Sciences, Raichur with the headquarters at Raichur with the territorial jurisdiction extending over the districts of Gulbarga, Bidar, Raichur, Bellary, Koppal and the University established under clause (b) of sub-section (1), shall cease to have territorial jurisdiction extending over such area.

(2A) There shall be established a university called Keladi Shivappa Nayaka Agricultural and Horticultural Sciences University with its head quarters at Shivamogga, having jurisdiction over the districts of Chitradurga, Chickamagalur, Shivamogga, Udupi, Dakshina Kannada, Kodagu and Davanagere and shall exercise such powers and shall be responsible for discharge of all the functions of a university established under this Act.

(2B) Notwithstanding anything contained in the University of Horticultural Sciences Act, 2009, Keladi Shivappa Nayaka Agricultural and Horticultural Sciences University, Shivamogga shall exercise all the powers and shall be responsible for discharge of all functions of a university established under the said Act within its jurisdiction over the districts specified in sub-section (2A).

**XXX XXX XXX**

**4. Jurisdiction.-** (1) Each University shall be responsible for the maintenance of Agriculture, Husbandry, Fishery, Sericulture and Forestry Training or Educational Centresand Research and experimental stations, and for the programme of training of field extension workers and for the establishment, development and operation of such centers as may be required in various parts within its territorial jurisdiction.

**XXX XXX XXX**

**7. Powers and functions of the University.-** The University shall have the following powers and functions, namely:-

(1) to provide for undergraduates and postgraduate instructions in agriculture and other allied branches of learning as the University may deem fit;

(2) to provide for conducting research in agriculture and allied branches of learning;

(3) to provide for dissemination of the findings of research and technical information through extension education programme;

(4) to institute course of study and hold examinations for and confer degrees, diplomas and other academic distinctions on, persons who have pursued a prescribed course of study or research or both in the University or including part time courses and/or research carried out in any other University or recognized institutions for this purpose;

(5) to confer honorary degrees and other distinctions as may be prescribed;

(6) to provide training for farmers, field workers, rural youths and other persons not enrolled as regular students of the University;

(7) to collaborate with other universities and institutions in such manner and for such purposes as the university my determine, subject to the limitations set forth in section 4;

(8) to establish and maintain colleges and other institutions relating to agriculture, Home Science, Agricultural Engineering Forestry and allied Sciences;

(9) to establish and maintain laboratories, libraries, research stations and institutions and museums for teaching, research and extension education;

(10) to create teaching, research and extension education posts and to appoint persons to such posts;

(11) to create administrative and other posts and to appoint persons to such posts;

(12) to institute and award fellowship, scholarships, stipends and prizes in accordance with the Statutes;

(13) to institute and maintain residential accommodations for students and staff of the University;

(14) to fix, demand and receive such fees and other charges as may be prescribed;

(15) to supervise and control the residence conduct and discipline of the students of the University, and to make arrangements for promoting their health and welfare;

(16) to accept donations from foreign countries and from within the country:

Provided that no donations from a foreign country, foreign foundation or from any person in such country shall be accepted by the University save with the prior approval of the Government.

(17) to allow the university to admit to its privileges institutions functioning outside India;

(18) to grant affiliation to private agricultural institutions to conduct instruction in Agriculture and allied sciences as decided under various statutes;

(19) to do all such acts and things whether incidental to the powers aforesaid or not as may be required in order to furtherance the objects of the university;

**XXX XXX XXX**

**9. Transfer of certain colleges and institutions to the University of Agricultural Sciences, Raichur.-** On and from the date of commencement of this Act,-

(a) all colleges, attached hostels, other buildings together with the articles of furniture, libraries, books, laboratories, stores, instruments, apparatus, appliances and equipment and all other property both moveable and immoveable, research and other institutions owned and managed by the University referred to in clause (b) of sub-section (1) of section 3, prior to the commencement of this Act, situated within the territorial jurisdiction of the University of Agricultural Sciences, Raichur shall along with all the

properties, assetsliabilities and obligations stand transferred to and vest in the University of Agricultural Sciences, Raichur:

Provided that the State Government may grant to the University of Agricultural Sciences, Raichur such additional development grant as it may deem fit for developing a campus at Raichur.

(b) (i) any student who was studying for any examination of the University referred to in clause (b) of sub-section (1) of section 3, prior to the commencement of this Act, in the colleges transferred to the University of Agricultural Sciences, Raichur shall be permitted to complete his course in the University of Agricultural Sciences, Raichur which shall make arrangements for holding for such students examinations for such period as may be prescribed in accordance with the curricula of that University;

(ii) if the University referred to in clause (b) of sub-section (1) of section 3, has prior to the commencement of this Act, held any examination the result of which have not been declared though the course requirements are conferred or issued or the results of any such examination have not been declared though the course requirements are completed then the University of Agricultural Sciences, Dharwad may declare the results and confer the degree.

(c) every teacher and other employee of the University referred to in clause (b) of sub-section (1) of section 3 and serving in or attached to any of the institutions situated within the territorial jurisdiction of the University of Agricultural Sciences, Raichur before the date of commencement of this Act, shall as from such date stand transferred to the appropriate cadre or category of posts in the University of Agricultural Sciences, Raichur:

Provided that any teacher or other employee so transferred may within ninety days or within such further period not exceeding six months as the State Government may by order direct, from the date of commencement of this Act apply to the State Government for transfer to the University of Agricultural Sciences, Dharwad and the decision of the State Government thereon shall be final;

(d) any teacher or other employee of the University of Agricultural Sciences, Dharwad who desires to get transferred to the University of Agricultural Sciences, Raichur may within ninety days or within such further period not exceeding six months as the State Government may by order direct, from the date of commencement of this Act apply to the State Government for transfer to the University of Agricultural Sciences, Raichur and the decision of the State Government thereon shall be final;

(e) the State Government may in consultation with the Vice-Chancellors of the University of Agricultural Sciences, Dharwad and the University of Agricultural Sciences, Raichur determine the excess teaching and other employees, if any, in these Universities and transfer the staff so in excess to University of Agricultural Sciences, Dharwad or the University of Agricultural Sciences, Raichur as the case may after following such principles and procedure as it may consider appropriate.

**XXX XXX XXX**

**12. The Board of Management and its Constitution.-** (1) The Chancellor shall, as soon as may constitute the Board of Management.

(2) The Board of Management shall consist of the following:-

**XXX XXX XXX**

(vi) Three members of the Karnataka State Legislative Assembly nominated by the Speaker and one member of the Karnataka State Legislative Council nominated by the

Chairman to each of the Universities of Bangalore, Dharawad, Raichur and to Keladi Shivappa Nayaka Agricultural and Horticultural Sciences University at Shivamogga on rotation basis – Member

**XXX XXX XXX**

**27. Vice-Chancellor.- XXX XXX XXX**

(4) Notwithstanding anything contained in sub-section (3) the first Vice-Chancellor of the University of Agricultural Sciences, Raichur shall be appointed by the Chancellor on the recommendation of the State Government.

(4A) Notwithstanding anything contained in sub-section (3), the first Vice-Chancellor of 2 Keladi Shivappa Nayaka Agricultural and Horticultural Sciences University Shivamogga shall be appointed by the Chancellor on the recommendation of the State Government.

**XXX XXX XXX**

67. State Co-ordination Committee for Agricultural Education, Research and Extension.-

**XXX XXX XXX**

(2) The State Co-ordination Committee shall consist of the following members, namely:-

(a) The Minister in charge of Agriculture, Government of Karnataka shall be the Chairperson;

(b) The Vice-Chancellor of All Agricultural Universities in the State;

(c) The Directors of Education, Research and Extension of all Agricultural Universities

(d) Registrars of all the Agricultural Universities in the State.

(e) The Secretary to Government, Agriculture Department shall be the Member Secretary.

**XXX XXX XXX**

**68. Continuance of Statutes and Regulations etc.-** (1) Until the Statutes or Regulations are made under the appropriate provisions of this Act, the Statutes or Regulations which are made under the provisions of the Karnataka Universities of Agricultural Sciences Act, 1963, and in force immediately before the appointed day shall subject to such adaptations or modifications as may be made therein by the Vice-Chancellor with the approval of Chancellor and in so far as they are not inconsistent with the provisions of this Act be deemed to be Statutes and Regulations made under the appropriate provisions of this Act.

(2) The person holding the office of the Vice-Chancellor of the University established under the Karnataka of Agriculture Sciences Act, 1963, on the date of commencement of this Act shall continue to hold office till such date as he would have held that office, if this Act had not been passed.

**XXX XXX XXX**

Govt. Press, Vikasa Soudha, Bengalur, 19th Mar, 2025, P7, W.D. , Copies 300